ದಿನಾಂಕ 16.6.2026 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದಃ-

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯ ಬಗ್ಗೆ ನನ್ನನ್ನು 7 ನೇ ಪ್ರತಿವಾದಿಯಾಗಿ ಸೇರಿಸಿದ ನಂತರ ತಿಳಿದು ಬಂದಿರುತ್ತದೆ. ಈ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡುವ ಪೂರ್ವದಲ್ಲಿ ಈ ದಾವೆಯ ಬಗ್ಗೆ ಯಾವ ವಿಚಾರವೂ ತಿಳಿದಿರಲಿಲ್ಲ. ವಾದಿ ಪ್ರತಿವಾದಿಯರ ಕುಟುಂಬದವರ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಪ್ರಮಾಣಪತ್ರದಲ್ಲಿ ವಾದಿ ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ 4 ರಿಂದ 6 ನೇ ಪ್ರತಿವಾದಿಯರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

2. ಮೂಕಮ್ಮರವರಿಗೆ ಹನುಮಂತಪ್ಪ ಎನ್ನುವ ಮಗ ಇದ್ದ ವಿಚಾರ ನನಗೆ ತಿಳಿದಿರಲಿಲ್ಲ. ಕಮಲಮ್ಮರವರ ಗಂಡ ಹನುಮಂತಪ್ಪರವರ ಬಗ್ಗೆ ನನಗೆ ಮಾಹಿತಿ ಇಲ್ಲ. ಕಬಾಡಿ ಹನುಮಂತಪ್ಪ ಕಮಲಮ್ಮರವರ ಗಂಡ ಹೌದೋ ಅಲ್ಲವೋ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ , ಅವರಿಬ್ಬರೂ ಒಂದೇ ಮನೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನಾನು ಸದರಿ ವಿಚಾರವನ್ನು ಖುದ್ದು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಕಬಾಡಿ ಹನುಮಂತಪ್ಪ ನನ್ನ ತಂದೆಯ ಚಿಕ್ಕಪ್ಪ. ಕಬಾಡಿ ಹನುಮಂತಪ್ಪ ಮತ್ತು ನಾನು ಒಂದೇ ಕುಟುಂಬದವರು ಎಂದರೆ ಸರಿ. ಕಬಾಡಿ ಹನುಮಂತಪ್ಪರವರಿಗೆ ವಿವಾಹ ಆಗಿದ್ದು ಸದರಿಯವರ ಹೆಂಡತಿ ಮಕ್ಕಳು ಇದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ಸದರಿಯವರು ಕಮಲಮ್ಮರವರೊಂದಿಗೂ ವಾಸವಿದ್ದರು ಎಂದು ನುಡಿಯುತ್ತಾರೆ. ಕಬಾಡಿ ಹನುಮಂತಪ್ಪರವರು ಎಂದಿಗೂ ಕಮಲಮ್ಮರವರ ಜೊತೆ ವಾಸವಿರದೇ ಇದ್ದರೂ 1 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಮಲಮ್ಮರವರ ಜೊತೆ ಕಬಾಡಿ ಹನುಮಂತಪ್ಪರವರು ವಾಸವಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಬಳಿ ಇರಬಹುದು ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತು ಮೂಲತಃ ಕಮಲಮ್ಮರವರ ಆಸ್ತಿ ಎಂದರೆ ಸಾಕ್ಷಿಯು ಕಮಲಮ್ಮರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ದಾವಾಸ್ತಿಗಳು ಯಾವುವು ಎಂದು ನನಗೆ ಮಾಹಿತಿ ಇದೆ . ದಾವಾ ಅ 1 ಮತ್ತು 2 ನೇ ಸ್ವತ್ತು ಕಮಲಮ್ಮರವರಿಗೆ ಅವರ ಕಾನೂನುಬದ್ಧ ಗಂಡನ ಮನೆಯಿಂದ ಬಂದಿರುಬಹುದು ಎಂದರೆ ಇರಬಹುದು . ದಾವಾ ಬ ಸ್ವತ್ತು ಕಮಲಮ್ಮರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. 1 ನೇ ವಾದಿ ಮತ್ತು 2 ರಿಂದ 6 ನೇ ಪ್ರತಿವಾದಿಗಳು ಕಮಲಮ್ಮರವರ ಕುಟುಂಬದವರು ಎಂದರೆ ನನಗೆ ಮಾಹಿತಿ ಇರುವುದಿಲ್ಲ.

4. ನಾನು 2018-19 ರಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತೇನೆ. ನಾನು ಪುರಸಭೆ ಚುನಾವಣೆಗೆ ಸ್ಪರ್ಧಿಸುತ್ತಿದ್ದ ವಿಭಾಗದಲ್ಲಿ ವಾದಿ ಮತ್ತು ಪ್ರತಿವಾದಿಗಳು ವಾಸ ಮಾಡುತ್ತಿದ್ದರು ಎಂದರೆ ಸರಿ. ಆದಕಾರಣ ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದವರ ಸಂಪೂರ್ಣ ವಿವರ ನನಗೆ ತಿಳಿದಿತ್ತು ಎಂದರೆ ಸಾಕ್ಷಿಯು 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಬಗ್ಗೆ ಗೊತ್ತಿತ್ತು. 3 ರಿಂದ 6 ನೇ ಪ್ರತಿವಾದಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ.

5. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಾವಾ ಬಿ ಸ್ವತ್ತನ್ನುಕಮಲಮ್ಮರವರು ಜುಬಾನಿ ಹಿಸ್ಸೆ ಆದ ನಂತರ ಖರೀದಿಸಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ದಾವಾ ಅ 1 ನೇ ಸ್ವತ್ತನ್ನು ಕಮಲಮ್ಮರವರ ಜೀವಿತಾವಧಿಯಲ್ಲಿ 1 ನೇ ವಾದಿಯು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದು ಕೆಲವು ಸಮಯದಲ್ಲಿ 1 ನೇ ವಾದಿಗೆ ಸಾಗುವಳಿ ಮಾಡಲು ಗೇಣಿ ಕೊಟ್ಟಿದ್ದರು . 1 ನೇ ವಾದಿಗೆ ಗೇಣಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಕಮಲಮ್ಮರವರ ಅನುಮತಿ ಮೇರೆಗೆ ದಾವಾ ಅ 1 ನೇ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದು ಗೇಣಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ದಾವಾ ಅ 1 ನೇ ಸ್ವತನ್ನು ಯಾರಿಗೂ ಗೇಣಿ ಕೊಟ್ಟಿರುವುದಿಲ್ಲ , 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದರು . ಸದರಿ ವಿಚಾರವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಸ್ವತ್ತಿನ ಬಗ್ಗೆ 1 ನೇ ವಾದಿ ಮತ್ತು 1 ನೇ ಪ್ರತಿವಾದಿಗೆ ಯಾವಾಗಿನಿಂದ ಮನಸ್ತಾಪ ಶುರು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯು ಕಮಲಮ್ಮರವರ ಆಸ್ತಿ ಆದ ಕಾರಣ 1 ನೇ ವಾದಿಗೆ ಹಾಗೂ 2 ರಿಂದ 6 ನೇ ಪ್ರತಿವಾದಿಗೆ ಹೋಗಬೇಕು ಎಂದರೆ ಸರಿಯಲ್ಲ. ನಮ್ಮ ಸಮಾಜದ ಪರವಾಗಿ ಸಾಕ್ಷಿ ನುಡಿಯುವುದಾಗಿ ಹೇಳಿದ್ದು ಯಾವುದೇ ಅಧಿಕಾರ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು 2017 ರಲ್ಲಿ 7 ನೇ ಪ್ರತಿವಾದಿ ಸಮಾಜಕ್ಕೆ ಅಧ್ಯಕ್ಷನಾಗಿರುತ್ತೇನೆ. ನನ್ನ ಅವಧಿಯು ಮಹಾಸಭೆಯ ನಡಾವಳಿಯಂತೆ ಮುಂದುವರೆದಿದೆ ಎಂದು ನುಡಿಯುತ್ತಾರೆ.

7. 7 ನೇ ಪ್ರತಿವಾದಿ ಸಮಾಜವು ನೋಂದಾವಣಿ ಆಗಿರುವ ಬಗ್ಗೆ ನೋಂದಾವಣಿ ದಾಖಲೆಯನ್ನು , ಬೈಲಾವನ್ನು ಹಾಜರುಪಡಿಸಿರುವುದಿಲ್ಲ . ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ನೋಂದಾವಣಿ ಪತ್ರ ಮತ್ತು ಬೈಲಾವನ್ನು ಉಪ ನೋಂದಣಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾನಪತ್ರವನ್ನು ಸಮಾಜದ ಪರವಾಗಿ ನನ್ನ ಹೆಸರಿನಲ್ಲಿ ನೋಂದಣಿ ಮಾಡಲು ಅನುಮತಿ ಪತ್ರ ಹಾಜರುಪಡಿಸಿರುತ್ತೀರಾ ಎಂದರೆ ನನಗೆ ನೆನಪಿಲ್ಲ . ಸಮಾಜದ ಪರವಾಗಿ ದಾನಪತ್ರವನ್ನು ನನ್ನ ಹೆಸರಿನಲ್ಲಿ ನೋಂದಾವಣಿ ಮಾಡಿಸಲು ನಾನು ಯಾವುದೇ ಅನುಮತಿ ಪತ್ರ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಸಮಾಜದ ಅನುಮತಿ ಪಡೆದು ನೋಂದಣಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ .

8. ನಿಡಿ 14 ರಲ್ಲಿ ನಾನು ಅಧಿಕಾರ ಪತ್ರ ಹಾಜರುಪಡಿಸಿ ನನ್ನ ಹೆಸರಿನಲ್ಲಿ ಸಮಾಜದ ಪರವಾಗಿ ನೋಂದಣಿ ಮಾಡಿಸಿಕೊಂಡ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ . ಸಮಾಜದ ಬೈಲಾದಲ್ಲಿ ಸ್ವತ್ತನ್ನು ಖರೀದಿ ದಾನ ಮಾಡಿಕೊಳ್ಳುವ ಬಗ್ಗೆ ಯಾವುದೇ ನಿಯಮ ಇಲ್ಲ ಎಂದರೆ ಸರಿಯಲ್ಲ. ಸಮಾಜದ ಪರವಾಗಿ ಸ್ವತ್ತನ್ನು ದಾನ ಪಡೆಯಲು ಸರ್ಕಾರದ ನಿಬಂಧನೆಗಳು ಮತ್ತು ನಮ್ಮ ಬೈಲಾದಲ್ಲಿ ನಿಯಮಗಳು ಇದ್ದು , ಸದರಿ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ ನನ್ನ ಹೆಸರಿನಲ್ಲಿ ಸಮಾಜದ ಪರವಾಗಿ ದಾನಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

9. ನಾನು ಸಮಾಜದ ಪರವಾಗಿ ಅಧಿಕೃತವಾದ ಅಧಿಕಾರ ಪತ್ರವನ್ನು ಹಾಜರುಪಡಿಸದೇ ನನ್ನ ಹೆಸರಿನಲ್ಲಿ ನೋಂದಾವಣಿ ಮಾಡಿಸಿಕೊಂಡಿದ್ದರಿಂದ ದಾನಪತ್ರ ಅಸಿಂಧು ಎಂದರೆ ಸರಿಯಲ್ಲ. ಕಾನೂನು ಸಲಹೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ದಾನಪತ್ರವನ್ನು ನೋಂದಾವಣಿ ಮಾಡಿಸಿಕೊಳ್ಳುವ ಪೂರ್ವದಲ್ಲಿ ಯಾವುದೇ ಕಾನೂನುಸಲಹೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಾನಪತ್ರ ಮಾಡಿಸಿಕೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತಿಗೆಸಂಬಂಧಿಸಿ ದಾವೆ ವಿಚಾರಣೆಗೆ ಬಾಕಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ದಾವಾಸ್ತಿಯನ್ನು ಪರಭಾರೆ ಮಾಡಬಾರದು ಎಂದು ನಿಬಂಧಕಾಜ್ಞೆ ಆದೇಶ ಜಾರಿಯಲ್ಲಿತ್ತು ಎಂದರೆ ಸಾಕ್ಷಿಯು ದಾವಾ ಸ್ವತ್ತಿನ ನೋಂದಣಿ ಮಾಡಿಸಿಕೊಳ್ಳಲು ಯಾವುದೇ ಅಭ್ಯಂತರ ಇರಲಿಲ್ಲ ಎಂದು ನಮಗೆ ಮಾಹಿತಿ ನೀಡಿದ್ದರಿಂದ ನೋಂದಣಿ ಮಾಡಿಸಿಕೊಂಡಿರುತ್ತೇವೆ. ನಿರ್ಬಂಧಕಾಜ್ಞೆ ಆದೇಶ ಜಾರಿಯಲ್ಲಿರುವಾಗ ದಾಖಲೆಗಳನ್ನುಪರಿಶೀಲಿಸಿ ನೋಂದಾವಣಿ ಮಾಡಿಸಿಕೊಂಡಿರುತ್ತೇವೆ. ದಾನಪತ್ರ ಮಾಡಿದ ಸಮಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಜಾರಿಯಲ್ಲಿರುವ ವಿಚಾರ ನನಗೂ ಮತ್ತು 1 ನೇ ಪ್ರತಿವಾದಿಗೆ ತಿಳಿದಿದ್ದರೂ ಉದ್ದೇಶಪೂರ್ವಕವಾಗಿ ನಿರ್ಬಂಧಕಾಜ್ಞೆ ಆದೇಶವನ್ನು ಉಲ್ಲಂಘಿಸಿ ದಾನಪತ್ರ ಮಾಡಲಾಗಿದೆ ಎಂದರೆ ಸರಿಯಲ್ಲ.

10. ದಾನಪತ್ರ ಆದ ನಂತರ ಸಹಕಾರ ಸಂಘಗಳ ಉಪನಿಬಂಧಕರಿಗೆ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತೇನೆ. ಸಮಾಜದ ಬೈಲಾದಲ್ಲಿ ಸಮಾಜಕ್ಕೆ ಯಾವ ಯಾವ ಅಸ್ತಿಗಳು ಇವೆ ಎಂದು ಯಾವುದೇ ನಮೂದು ಇಲ್ಲ ಎಂದರೆ ಸಾಕ್ಷಿಯು ದಾನಪತ್ರದ ಮೂಲಕ ಬಂದ ಆಸ್ತಿಯೇ ಸಮಾಜದ ಆಸ್ತಿ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ ಸಮಾಜ ನೋಂದಣಿ ಆಗಿರುವುದಿಲ್ಲ , ಬೈಲಾ ಇರುವುದಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಸಮಾಜ 2005-06 ರಲ್ಲಿ ನೋಂದಾವಣಿ ಆಗಿರುತ್ತದೆ.

11. ದಿನಾಂಕ 10.12.2020 ರ ಸಮಾಜದ ಸಭೆಯಲ್ಲಿ ಸಮಾಜದ ವತಿಯಿಂದ ಕಟ್ಟಡ ನಿರ್ಮಾಣ ಮಾಡಲು ತೀರ್ಮಾನ ಮಾಡಲಾಗಿರುತ್ತದೆ. ಸದರಿ ಸಭೆಯು ವಿಶೇಷ ಸರ್ವ ಸಾಧಾರಣ ಸಭೆ ಅಗಿರುತ್ತದೆ. ನಿಡಿ 9 ರ ನಡಾವಳಿಯಂತೆ ಕಟ್ಟಡ ನಿರ್ಮಾಣ ಮಾಡಲು

ತೀರ್ಮಾನ ಮಾಡಲಾಗಿರುತ್ತದೆ . ನಿಡಿ 9 ರಲ್ಲಿ ಸದರಿ ಸಭೆಯು ವಿಶೇಷ ಸಾಧಾರಣ ಸಭೆಯೋ ಅಥವಾ ಸಾಮಾನ್ಯ ಸಾಧಾರಣ ಸಭೆಯೆಂದು ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಕಾರ್ಯದರ್ಶಿಯು ಸಭೆ ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 9 ರ ಮೂಲ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಮೂಲ ದಾಖಲೆ ಹಾಜರುಪಡಿಸಿ ಮೂಲ ದಾಖಲೆಯೊಂದಿಗೆ ಹೋಲಿಸಿ ನಕಲನ್ನು ಗುರುತಿಸಲಾಗಿದೆ ಎಂದು ನುಡಿಯುತ್ತಾರೆ. ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿಯು ಸಮಾಜಕ್ಕೆ ನಮ್ಮ ಸಮಾಜದ ಮುಖಂಡರುಗಳು ಮತ್ತು ಜಗದ್ಗುರುಗಳ ಸಮ್ಮುಖದಲ್ಲಿ ಆಗಿರುತ್ತದೆ. ಆ ರೀತಿ ಯಾವುದೇ ಪ್ರಕ್ರಿಯೆ ನಡೆದು ನೇಮಕಾತಿ ಆಗಿರದೇ ಇದ್ದರೂ ನಾವೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂದು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ಯಾವುದೇ ಸಭೆ ಕರೆಯದೇ ನಾವೇ ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ . ಅಧ್ಯಕ್ಷ , ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸುವುದಿಲ್ಲ ಎಂದರೆ ಸರಿ. ಸದಸ್ಯರ ನೋಂದಾವಣಿಗೆ ಯಾವುದೇ ಅರ್ಜಿ ಸಲ್ಲಿಸಿ ನೋಂದಾವಣಿ ಮಾಡುವ ಪ್ರಕ್ರಿಯೆ ಇಲ್ಲ ಎಂದರೆ ಸರಿಯಲ್ಲ . 7ನೇ ಪ್ರತಿವಾದಿ ಸಮಾಜಕ್ಕೆ ಯಾವುದೇ ಸದಸ್ಯರ ನೋಂದಾವಣಿ ಆಗಿರದ ಕಾರಣ ಅಧ್ಯಕ್ಷ , ಉಪಾಧ್ಯಕ್ಷ ನಿರ್ದೇಶಕರ ಆಯ್ಕೆ ಪ್ರಶ್ನೆ ಇಲ್ಲ ಎಂದರೆ ಸರಿಯಲ್ಲ. ನಾನು ಅಧ್ಯಕ್ಷನಾಗಿ ಆಯ್ಕೆಯಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.